# ನಿಗೂಢಗಳ ಆಳದಿಂದ ಹೊರಬಂದ ಸತ್ಯದ ಬೆಳಕು

‘ವಿನಯ್ ಆ ಮುರುಗನ್‌ನ ಕರೆದುಕೊಂಡು, ಜಯಂತ್ ಅಡಗಿ ಕುಳಿತಿದ್ದನಲ್ಲ, ಓಲ್ಡ್ ಏಜ್ ಹೋಮ್, ಆ ಜಾಗಕ್ಕೆ ಹೋಗಿ. ಆ ಜಾಗದಲ್ಲಿ ಏನೋ ಹುಡುಕುವುದಿದೆ ಎಂಬ ನೆಪದಲ್ಲಿ... ಅವನ ಮೇಲೆ ನಮಗೆ ಅನುಮಾನ ಬಂದಿದೆ ಎಂಬ ಸಣ್ಣ ಸುಳಿವೂ ಸಿಗಬಾರದು, ಜಯಂತನ ಮೇಲೆ ಇನ್ನೇನು ಚಾರ್ಜ್‌ಶೀಟ್ ಹಾಕುವುದೊಂದೇ ಬಾಕಿ ಅನ್ನುವಂತಿರಲಿ ನಿಮ್ಮ ಮಾತುಕತೆ. ಒಂದೆರಡು ಗಂಟೆಗಳ ಕಾಲ ಅವನನ್ನು ಅಲ್ಲೇ ಎಂಗೇಜ್ ಮಾಡಿ...’

‘ಯೆಸ್ ಸಾರ್...’

ಸ್ವಲ್ಪಹೊತ್ತು ಬಿಟ್ಟು ಮಾಯಣ್ಣ, ಜಯಂತನ ಫ್ಯಾಕ್ಟರಿಯ ಹಿಂಬದಿಯಲ್ಲಿ ಮುರುಗನ್ ವಾಸವಿದ್ದ ಅವನ ಮನೆಗೆ ಬಂದಿದ್ದ. ಈಗಾಗಲೇ ಸಾಕಷ್ಟು ಪರಿಣಿತನಾಗಿದ್ದ ಮಾಯಣ್ಣನಿಗೆ ಬೀಗ ಜಡಿದ ಬಾಗಿಲುಗಳು ಒಂದು ಸಮಸ್ಯೆಯೇ ಆಗಿರಲಿಲ್ಲ. ಅಲ್ಲಿ ಇಂಚಿಂಚು ಹುಡುಕಲು ಮೂರು ಮುಖ್ಯವಾದ ವಸ್ತುಗಳು ಸಿಕ್ಕಿದ್ದವು. ಒಂದು, ಅಟ್ಟಣಿಗೆಯ ಮೇಲೆ ಹಿಂದಕ್ಕೆ ಹಾಕಿದ್ದ ಅಮ್ಮುವಿನ ಮೊಬೈಲ್ ಫೋನು; ಎರಡು, ಗೋಡೆಯ ಗೂಟಕ್ಕೆ ನೇತಾಕಿದ್ದ, ದಪ್ಪನೆಯ, ಉಣ್ಣೆಯ, ಮಂಡಿಯ ತನಕ ಈಜಾಡುವ, ನೀಳ, ಕಪ್ಪು ಕೋಟು; ಮತ್ತು ಮೂರು, ಒಂದು ಜೊತೆ ರಬ್ಬರ್ ಕೈಗವಸು. ಅಮ್ಮು ಕೊಲೆಗೆ ಬಳಸಿದ ರಾಡಿನ ತುದಿಗೆ ಅಂಟಿಕೊಂಡಿದ್ದ ಕಪ್ಪು ಎಳೆಗಳು ಈ ಕೋಟಿನದೇ ಆಗಿರಬಹುದೆಂದು ಮಾಯಣ್ಣನ ಅನುಮಾನವಾಗಿತ್ತು. ಬಹುಶಃ ಕೊಲೆಯ ನಂತರ ಆ ರಕ್ತಸಿಕ್ತ ಸರಳನ್ನು ಈ ಕೋಟಿನ ಒಳಭಾಗದಲ್ಲಿದ್ದ ಆಳವಾದ ಜೇಬಿನಲ್ಲಿ ಕೊಂಡೊಯ್ದಿರಬಹುದು. ಆ ಮೊಬೈಲ್ ಮತ್ತು ಕೈಗವಸು ಮತ್ತು ಕೋಟಿನ ಒಂದಷ್ಟು ಎಳೆಗಳನ್ನು ವಿಧಿವಿಧಾನದಂತೆ ಸಂಗ್ರಹಿಸಿ ಅಲ್ಲಿಂದ ಠಾಣೆಗೆ ಹೊರಟುಬಂದಿದ್ದ. ಆ ಮೂರು ಸಾಕ್ಷಿಗಳನ್ನು ತಕ್ಷಣ ಪ್ರಯೋಗಾಲಯಕ್ಕೆ ಕಳುಹಿಸುವ ಏರ್ಪಾಟಾಗಿತ್ತು. ಮಾರನೇ ದಿನದ ರಾತ್ರಿ ಹತ್ತು ಗಂಟೆಗೆ ಮಾಯಣ್ಣನ ಮೊಬೈಲಿಗೆ ಮಿಂಚಂಚೆಯ ಮೂಲಕ ಬಂದಿತ್ತು ಪ್ರಯೋಗಾಲಯದ ವರದಿ, ಆತ ಊಹಿಸಿದ್ದನ್ನು ಪುಷ್ಟೀಕರಿಸುವಂತೆ.

ಮುರುಗನ್ ಮನೆಯಲ್ಲಿ ಪತ್ತೆಯಾದ ಮೊಬೈಲ್ ಅಮ್ಮುವಿನದೇ ಮತ್ತು ಅದರ ಮೇಲಿನ ಬೆರಳಚ್ಚು ಮುರುಗನ್‌ದು ಎಂದು.

ಅಲ್ಲದೆ, ಅಮ್ಮು ಫೋನಿಂದ ಮುರುಗನ್‌ಗೆ ಕೊಲೆಯ ಹಿಂದಿನ ದಿನ, ವ್ಯಾಟ್ಸ್ಆ್ಯಪ್ ಸಂದೇಶ ಹೋಗಿದ್ದೂ ಸಹ ಖಾತರಿಯಾಗಿತ್ತು.

‘ಸರಕು ಹೇರಿದ್ದ ಲಾರಿಯನ್ನು ಕದ್ದೊಯ್ದಿರುವುದು ಬಹುಶಃ ವೇಲು ಇರಬಹುದು, ಇದರ ಜೊತೆಗಿರುವ ಟೋಲ್ ರಶೀತಿಯ ಫೋಟೊವನ್ನು, ಕಳುವಿನ ತನಿಖೆ ನಡೆಸುತ್ತಿರುವ ಠಾಣೆಯ ಇನ್ಸ್‌ಪೆಕ್ಟರಿಗೆ ಕೊಡಿ, ಅವರಿಗೆ ಗೊತ್ತಿರುತ್ತೆ, ಅವರು ಮುಂದಿನದು ನೋಡುತ್ತಾರೆ. ಆ ರಬ್ಬರ್ ಕೈಗವಸಿನ ಮೇಲಿದ್ದ ರಕ್ತ ಮತ್ತು ಆಯಿಲ್ ಸೇರಿದ ಮಿಶ್ರಣ ಮತ್ತು ಕೊಲೆಗೆ ಬಳಸಿದ ಸರಳಿನ ಹಿಡಿಯ ಮೇಲಿನ ದ್ರವದ ಮಾದರಿ ಒಂದೇ ಆಗಿದೆ.

ಕೊಲೆಗೆ ಬಳಸಿದ ಸರಳಿನ ಇನ್ನೊಂದು ತುದಿಯಲ್ಲಿ ಅಮ್ಮುವಿನ ರಕ್ತ, ಕೂದಲುಗಳ ಜೊತೆಗೆ ಇದ್ದ ಕಪ್ಪು ಬಣ್ಣದ ಎಳೆಗಳು ಮುರುಗನ್ ಮನೆಯಲ್ಲಿದ್ದ ಉಣ್ಣೆಯ ಲಾಂಗ್ ಕೋಟಿನ ಎಳೆಗಳು ಮ್ಯಾಚ್ ಆಗುತ್ತವೆ’ ಎಂದು ಮಾಯಣ್ಣನಿಗೆ ಸ್ಪಷ್ಟವಾಯಿತು.

ಅಷ್ಟು ಸಾಕ್ಷಿ ಪುರಾವೆಗಳು ಸಾಕಾಗಿತ್ತು ಅಮ್ಮುವಿನ ಕೊಲೆಗಾರ ಮುರುಗನ್‌ನನ್ನು ಹೆಡೆಮುರಿ ಕಟ್ಟಲು... ಊಟ ಮುಗಿಸಿ ಮಲಗಲು ಸಿದ್ಧವಾಗಿದ್ದ ಮಾಯಣ್ಣನಿಗೆ ನಿದ್ದೆ ಹಾರಿತ್ತು. ತಡ ಮಾಡುವಂತಿರಲಿಲ್ಲ. ಹಕ್ಕಿ ಗೂಡು ಬಿಡುವ ಸಾಧ್ಯತೆಯಿತ್ತು. ಇನ್ನಿಪ್ಪತ್ತು ನಿಮಿಷದಲ್ಲಿ ಮುರುಗನ್ ಅನ್ನು ವಶಕ್ಕೆ ತೆಗೆದುಕೊಳ್ಳಲು ಅವನ ತಾವಿನ ಮುಂದೆ ಬಂದು ನಿಂತಿದ್ದ ಮಾಯಣ್ಣ.

## 18

ಸಮಯ ರಾತ್ರಿ ಹತ್ತಾಗಿತ್ತು, ಹುಣ್ಣಿಮೆ ಚಂದ್ರ ಇನ್ನೂ ಪೂರ್ತಿ ಮೈತುಂಬಿಕೊಂಡಿರಲಿಲ್ಲ. ಮೊದಲಿಗೆ ಗೋಡೌನ್ ಎಂದು ಕಟ್ಟಲಾಗಿದ್ದ ಜಯಂತನ ಫ್ಯಾಕ್ಟರಿಯ ಹಿಂಬದಿಗೇ ಇದ್ದ ಈ ಕಟ್ಟಡ ಈಗ ಮುರುಗನ್ ಮನೆಯಾಗಿತ್ತು. ಇಲ್ಲಿಗೆ ಮೊದಲನೇ ಬಾರಿ ಅಮ್ಮುವಿನ ಕೊಲೆಗೆ ಸಂಬಂಧಪಟ್ಟ ಕೆಲವು ಸಾಕ್ಷ್ಯಾಧಾರಗಳನ್ನು

